# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 411 |
| ಸದಸ್ಯರ ಹೆಸರು | : | ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 15.09.2022. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕು ಯಡ್ರಾಡಿ ಗ್ರಾಮ ಪಂಚಾಯತ್‌ನಲ್ಲಿ ಪರವಾನಗಿ ನವೀಕರಿಸದಿರುವ ಉದ್ದಿಮೆಗಳು ಯಾವುವು: | ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕು ಯಡ್ರಾಡಿ ಗ್ರಾಮ ಪಂಚಾಯತ್‌ನಿಂದ ನವೀಕರಿಸದೆ ಇರುವ ಉದ್ದಿಮೆಗಳು ಈ ಕೆಳಕಂಡಂತಿವೆ.<br>1. ಹೈದರಾಲಿ ಬಿ.ಫಾತಿಮಾ, ಆರ್ ಕೆ ಗಿಫ್ಟ್ ಸೆಂಟರ್<br>2. ಮಿಥುನ್ ರಾಜ್, ಆಟೋಮೊಬೈಲ್ ಉದ್ಯಮ<br>3. ಜ್ಯೋತಿ ಬಿನ್ ಬಸವ, ಟೈಲರಿಂಗ್ ಉದ್ಯಮ<br>4. ಲಕ್ಷ್ಮೀ ದೇವಿ ಕೋಂ ನರಸಿಂಹ , ಜೀನಸು ಅಂಗಡಿ |
| (ಆ) | ನಿಸರ್ಗ ಕೋಕೋ ಪ್ರಾಡಕ್ಟ್‌ಗೆ ಅಕ್ರಮವಾಗಿ ಪರವಾನಗಿ ನೀಡಿ, ರೈತರು ಅಶುದ್ಧ (ಮಲೀನ) ನೀರನ್ನು ಕುಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆದಗುಕೊಂಡ ಕ್ರಮಗಳೇನು: | ಬಂದಿದೆ.<br><br>ವೀಣಾ ಸತೀಶ್ ಪೂಜಾರಿಯವರ ನಿಸರ್ಗ ಕೋಕೋ ಫ್ಯಾಕ್ಟರಿ ಪರವಾನಿಗೆಯನ್ನು ಗ್ರಾಮ ಪಂಚಾಯತ್ ನಿರ್ಣಯ ದಿ: 29-06-2022 ರಂದು ರದ್ದುಪಡಿಸಲಾಗಿದೆ. ಗ್ರಾಮ ಪಂಚಾಯತ್ ಪರವಾನಿಗೆ ಇಲ್ಲದ ಕಾರಣ ಮತ್ತು ದಾಸ್ತಾನು ಇರಿಸಿದ ತೆಂಗಿನ ನಾರಿನ ಮುಡಿಯಿಂದ ಪರಿಸರದ ಕುಡಿಯುವ ನೀರು ಕಲುಷಿತಗೊಳ್ಳುತ್ತಿರವುದರಿಂದ ದಾಸ್ತಾನನ್ನು ತೆರವುಗೊಳಿಸಲು ದಿನಾಂಕ:25-07-2022ರಂದು ಉದ್ದಿಮೆದಾರರಿಗೆ ಗ್ರಾಮ ಪಂಚಾಯತ್‌ನಿಂದ ನೋಟಿಸ್ ನೀಡಲಾಗಿದ್ದು, ಪ್ರಸ್ತುತ್ತ ಉದ್ದಿಮೆದಾರರು ದಾಸ್ತಾನು ಪರಿಸರದಿಂದ ತೆರವು ಮಾಡಲು ಕ್ರಮ ವಹಿಸಿರುತ್ತಾರೆ.<br><br>ಗ್ರಾಮ ಪಂಚಾಯತ್‌ನ ನೋಟಿಸ್‌ನ ವಿರುದ್ಧ ಉದ್ದಿಮೆದಾರರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ನ್ಯಾಯಲಯದಲ್ಲಿ ಮತ್ತು ಸಿವಿಲ್ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿಯು ವಿಚಾರಣಾ ಹಂತದಲ್ಲಿರುತ್ತದೆ. |
| (ಇ) | ಯಡ್ರಾಡಿ ಗ್ರಾಮ ಪಂಚಾಯತ್‌ನ ದೂರುದಾರರ ಬಾವಿಯಿಂದ ಕುಡಿಯುವ ನೀರುನ್ನು 2 ಬಾರಿ ಪರೀಕ್ಷಿಸಿದಾಗ ಕುಡಿಯಲು ಯೋಗ್ಯವಲ್ಲವೆಂದು ವರದಿ ಬಂದರೂ. ಪಂಚಾಯತ್ ದತ್ತವಾದ ಅಧಿಕಾರವನ್ನು ಬಳಸಿ ಕಾರ್ಖಾನೆಯನ್ನು ತೆರವು ಮಾಡದಿರಲು ಕಾರಣವೇನು: | ಉದ್ದಿಮೆದಾರರು ತೆಂಗಿನ ನಾರಿನ ಮುಡಿಯನ್ನು ದಾಸ್ತಾನು ಮಾಡಿದ ಪ್ರದೇಶದಲ್ಲಿ ಮಳೆಯ ನೀರಿನಿಂದಾಗಿ ಸ್ಥಳೀಯ ಬಾವಿ ನೀರು ಕುಡಿಯಲು ಯೋಗ್ಯವಲ್ಲವೆಂದು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಯವರು ವರದಿ ಮಾಡಿರುತ್ತಾರೆ. ಈ ಬಗ್ಗೆ ಪರಿಸರ ಮಾಲಿನ್ಯ ನಿಯಂತ್ರಣ ಇಲಾಖೆಗೆ ಗ್ರಾಮ ಪಂಚಾಯತ್‌ನಿಂದ ಕ್ರಮಕ್ಕಾಗಿ ಕೋರಿದ್ದು, ಸದರಿ ಇಲಾಖೆಯವರು ಸ್ಥಳ ಪರಿಶೀಲನೆಯನ್ನು ನಡೆಸಿ ನ್ಯೂನ್ಯತೆಗಳನ್ನು ಗುರುತಿಸಿ ಪತ್ರ ಸಂ.(NO.PCB/EO(UDUPI)/SO/complaint/2022-23/217 ದಿನಾಂಕ: 09-06-2022 ರಂತೆ ಇಲಾಖೆಯ ಮೊದಲನೇ |

| | | |
|---|---|---|
| (ಈ) | ಯಾವುದೇ ಕೋರ್ಟ್‌ನಲ್ಲಿ ತಡೆಯಾಜ್ಞೆ ಅಥವಾ ಯಾವುದೇ ಪ್ರತಿಬಂಧಕ ಇಲ್ಲದೆ ಇದ್ದರೂ ಯಡ್ರಾಡಿ ಗ್ರಾಮ ಪಂಚಾಯತ್ ಯಾವುದೇ ಕ್ರಮ ಕೈಗೊಳ್ಳದೇ ಉದ್ಯಮಿಗಳೊಡನೆ ಶಾಮೀಲಾಗಿರುವುದು ನಿಜವೇ: ಈ ಬಗ್ಗೆ ಜಿಲ್ಲಾ ಪಂಚಾಯತ್ ತೆಗೆದುಕೊಂಡ ಕ್ರಮವೇನು? | ಮೇಲ್ಮನವಿ ಪ್ರಾಧಿಕಾರವು ವರದಿ ಸಲ್ಲಿಸಿರುತ್ತಾರೆ.<br><br>ತೆಂಗಿನ ನಾರಿನ ಉದ್ಯಮವನ್ನು ತೆರವುಗೊಳಿಸಲು ಗ್ರಾಮ ಪಂಚಾಯತ್‌ನಿಂದ ನೋಟೀಸ್ ನೀಡಲಾಗಿದ್ದು, ಪ್ರಕರಣವು ಕುಂದಾಪುರ ಸಿವಿಲ್ ನ್ಯಾಯಾಲಯದಲ್ಲಿ OS.No.236/2022-23ರಂತೆ ವಿಚಾರಣೆಯಲ್ಲಿ ಇರುತ್ತದೆ ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರ ಮೇಲ್ಮನವಿ ಸಂ.02/2022-23 ರಲ್ಲಿ ತನಿಖೆ ಬಾಕಿ ಇದೆ ಹಾಗೂ ಪರಿಸರ ಮಾಲಿನ್ಯಕ್ಕೆ ಕಾರಣವಾದ ಈ ಸಂಗ್ರಹಣೆಯನ್ನು ತೆರವುಗೊಳಿಸಲು ಪರಿಸರ ಇಲಾಖೆಗೆ ಗ್ರಾಮ ಪಂಚಾಯತ್‌ನಿಂದ ಸಲ್ಲಿಸಲಾದ ಕೋರಿಕೆಯಂತೆ ಉಪ ಪರಿಸರ ಅಧಿಕಾರಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಈ ಪ್ರಕರಣದಲ್ಲಿ ಸದರಿಯವರು ಪರಿಸರ ಕಾನೂನಿಗೆ ಅಗೌರವ ತೋರಿರುವುದಾಗಿ ಕೇಂದ್ರ ಕಛೇರಿಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿರುವುದರಿಂದ ಸಂಬಂಧಿಸಿದ ಪ್ರಾಧಿಕಾರಗಳ ಮೂಲಕ ಕಾನೂನಿನ ವ್ಯಾಪ್ತಿಯೊಳಗೆ ಕ್ರಮಕೈಗೊಳ್ಳಲಾಗಿದೆ. |

ಸಂಖ್ಯೆ: ಗ್ರಾಅಪ 273 ಗ್ರಾಪಂಅ 2022

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ